Levy of water rate in Malnad area

1116. SRI L. T. THIMMAPPA HEGDE (Sagar).—Will the Minister for Revenue be pleased to state :—

(a) whether it has come to the notice of the Government that the people have protested against the levy of water rate for not having supplied water from the tanks to the lands in Malnad area ;

(b) if so, the steps taken by the Government about the legality of levying such tax ;

(c) whether the Revenue Officials while levying the tax ensure that water is being supplied, from the technical officers and obtain their recommendations (Details in respect of each survey numbers be furnished) ;

(d) whether the Government would at least now give up the tax levyied on atchkat basis which is not reasonable and find out the manner of levying tax only after ensuing that water is actually supplied ?

SRI B. BASAVALINGAPPA (Minister for Revenue).—

(a) Petitions have been received regarding non-supply of water.

(b) Suitable circular has been issued.

(c) Yes. (Considerable period is required to furnish details of each survey numbers).

(d) The matter is under the consideration of Government.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಇದರಲ್ಲಿ ಸೂಕ್ತ ಸುತ್ತೋಲೆಯನ್ನು ಕಳುಹಿಸಿದೆ ಎಂದು ಮಾನ್ಯ ಮಂತ್ರಿಗಳು ಉತ್ತರಕೊಟ್ಟಿದ್ದಾರೆ. ೧೫ ವರ್ಷಗಳಿಂದ ಬಾಕಿ ಇರುವ ಟ್ಯಾಕ್ಸ್‌ನ್ನು ವಸೂಲು ಮಾಡುವುದಕ್ಕೆ ತಿಳಿಸಿದ್ದಾರೆಯೇ ಅಥವಾ ಆದನ್ನು ತೆಗೆಯಬೇಕು, ವಸೂಲಾತಿ ನಿಲ್ಲಿಸಿದ್ದೇವೆ ಎಂದು ಸುತ್ತೋಲೆಯನ್ನು ಕಳುಹಿಸಿದ್ದೀರಾ ?

† ಶ್ರೀ ಬಿ. ಬಸವಲಿಂಗಪ್ಪ.—ಯಾವಾಗ ಕೆರೆಯಲ್ಲಿ ಹೂಳು ತುಂಬಿಹಿಟ್ಟು ವ್ಯವಸಾಯಕ್ಕೆ ಯೋಗ್ಯ ವಾಗಿಲ್ಲ ಅಂಥಾ ಕಡೆ ಕಂದಾಯ ವಸೂಲು ಮಾಡುವುದಕ್ಕೆ ಸೂಚನೆ ಇದ್ದು, ಹೂಳು ತುಂಬಿ ಆದರಿಂದ ಪ್ರಯೋಜನ ಆಗದೇ ಹೋದರೆ ಅಂತಹಾ ಜಮೀನುಗಳಿಗೆ ರಿಯಾಯಿತಿ ಕೊಡಬೇಕು ಅಥವಾ ವಜಾ ಮಾಡಬೇಕು ಎಂದು ಸುತ್ತೋಲೆ ಕಳಿಸಲಾಗಿದೆ. ಕರ್ನಾಟಕ ದೇಶದಲ್ಲಿ ಅಂಥಾ ಕೆರೆಗಳಿಂದ ಪ್ರಯೋಜನ ಪಡೆಯದವರಿಗೆ ವಾಟರ್ ರೇಟ್ ಹಾಕುತ್ತಿರುವುದಕ್ಕೆ ವಿನಾಯಿತಿ ಕೊಡಬೇಕು, ಆ ಒಂದು ಅಂಕಿ ಅಂಶ ಗಳನ್ನು ತರಬೇಕು ಎಂದು ಸುತ್ತೋಲೆಯನ್ನು ಕಳಿಸಿದ್ದೇವೆ. ಆ ಒಂದು ಅಂಕಿಅಂಶಗಳು ನಮಗೆ ಇನ್ನೂ ಬಂದಿಲ್ಲ. ಅದರ ಆಡಳಿತವನ್ನು ಪಿ.ಡಬ್ಲ್ಯೂ.ಡಿ.ಯವರು ನಡೆಸತಕ್ಕಂಥಾವರಿದ್ದಾರೆ. ಈಗ ಪುನಃ ರೆವಿನ್ಯು ಇಲಾಖೆಗೆ ಆದನ್ನು ತಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಈ ಡಿಮ್ಯಾಂಡನ್ನು ಅವರ ಮೇಲೆ ವಿಧಿಸುವಾಗ ಪ್ರತಿವರ್ಷ ಅವರಿಗೆ ನೋಟೀಸ್ ಕೊಡುತ್ತಾರೆ. ಇದು ಅತಾಂತ್ರಿಕ ಎಂದು ನಾನು ಹೇಳಬಲ್ಲೆ. ನೀರು ಪೂರೈಕೆ ಯಾಗಿದೆ ಅಥವಾ ಇಲ್ಲ ಎಂದು ಪ್ರತಿ ಸಾರಿಯೂ ನಂಬರ್‌ವಾರು ಟ್ಯಾಕ್ಸ್ ಹಾಕಬೇಕು ಎಂದು ತಿಳಿಸ

ಬೇಕು, ತಿಳಿಸದೇ ಹೋದರೆ ಮುಂದೆ ಏನಾದರೂ ತಿಳಿಸುತ್ತೀರಾ ? ಮತ್ತು ೧೫ ವರ್ಷಗಳ ರೆವಿನ್ಯು ಡಿಮ್ಯಾಂಡ್ ವಸೂಲಾತಿ ಮಾಡುವ ಬಗ್ಗೆ ನೀರಾವರಿ ಆಗದೇ ಇದ್ದವರಿಗೂ ಕಳುಹಿಸುತ್ತಿದ್ದಾರೆ. ಇದರಿಂದ ಅನೇಕರಿಗೆ ತೊಂದರೆಯಾಗಿದೆ. ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ ಬಸವಲಿಂಗಪ್ಪ.--ರೈತರ ಕಷ್ಟವನ್ನು ಮನವರಿಕೆ ಮಾಡಿಕೊಂಡು ಸಹಾನುಭೂತಿಯಿಂದ ಕಂದಾಯ ವಸೂಲು ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಮತ್ತೆ ಈ ವರ್ಷ ಯಾವ ಯಾವ ಕೆರೆಗಳಿಂದ ಎಷ್ಟೆಷ್ಟು ಕಂದಾಯ ಬಾಕಿದ್ದಾರೆ ಅದನ್ನು ಪುನಃ ಅಧಿಕಾರಿಗಳು ಪರಿಶೀಲನೆ ಮಾಡಬೇಕು ಎಂದು ಸುತ್ತೋಲೆಗಳನ್ನು ಕಳುಹಿಸಿದ್ದೇವೆ. ಮುಂದಿನ ವರ್ಷ ಇದನ್ನು ವ್ಯವಸ್ಥಿತವಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ. ಯಂಕಟಪ್ಪ.—ಸುತ್ತೋಲೆ ಕಳುಹಿಸಿರುವುದರಲ್ಲಿ ಯಾವ ಕೆರೆಗಳಿಂದ ನೀರು ಒದಗಿಲ್ಲ ಅವರಿಗೆ ಟ್ಯಾಕ್ಸ್ ಬಿಡಿರಿ ಎಂದು ಕಳುಹಿಸಿದ್ದೀರಾ ? ಮತ್ತೆ ೧೫ ವರ್ಷಗಳಿಂದ ಬಾಕಿ ಇರುವುದಕ್ಕೆ ನೋಟೀಸ್ ಕೊಟ್ಟು ಮನೆಯಲ್ಲಿದ್ದಂಥ ಪಳೇ ಸೈಕಲ್‌ನ್ನೂ ತೆಗೆದುಕೊಂಡು ಹೋಗಿದ್ದಾರೆ. ಇತರ ಪಾತ್ರೆಗಳನ್ನು ತೆಗೆದುಕೊಂಡಿದ್ದಾರೆ. ಆದುದರಿಂದ ಅಂತಹವರ ವಿಷಯದಲ್ಲಿ ಏನು ಕ್ರಮ ತೆಗೆದು ಕೊಳ್ಳಬೇಕು ಎಂದು ನಿರ್ದಿಷ್ಟವಾಗಿ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸರ್ವೇಸಾಧಾರಣವಾಗಿ ರಿಯಾಯಿತಿ ಕೊಡಲಿಕ್ಕೆ ಆಗುವುದಿಲ್ಲ. ನಿದರ್ಶನಗಳು ಯಾವುಯಾವುದು ಎಂದು ಆದನ್ನು ಪರಿಶೀಲನೆ ಮಾಡಿಬಿಟ್ಟು ಯೋಗ್ಯವಾಗಿದ್ದರೆ ಅವುಗಳಿಗೆ ರಿಯಾಯಿತಿ ಕೊಡುವುದು ಯೋಗ್ಯ. ಆದರೆ ಒಟ್ಟಾರೆ ಎಲ್ಲರಿಗೂ ಕೊಡಲಿಕ್ಕೆ ಆಗುವುದಿಲ್ಲ. ರೈತರ ಕಷ್ಟ ನಮಗೆ ಗೊತ್ತಿದೆ. ೧೫ ವರ್ಷಗಳಿಂದ ಕೊಡಬೇಕಾದಂಥ ಬಾಕಿಯನ್ನು ಕೊಟ್ಟಿಲ್ಲ, ಆದನ್ನು ವಸೂಲು ಮಾಡಲೇಬೇಕಾಗುತ್ತದೆ. ೧೫ ವರ್ಷಗಳಿಂದ ಸುಮ್ಮನೆ ಇದ್ದೀರಿ, ತಕರಾರು ಬಾರದೆ.

ಶ್ರೀ ಕೆ. ಯಂಕಟಪ್ಪ.—ಲಕ್ಷಾಂತರ ಆರ್ಜಿಗಳು ಅಸಿಸ್ಟೆಂಟ್ ಕಮಿಷನರ್ ಆಫೀಸಿನಲ್ಲಿ ಪೆಂಡಿಂಗ್ ಇವೆ. ಆದನ್ನು ಯಾರೂ ನೋಡುತ್ತಾ ಇಲ್ಲ ಈಗ ೧೫ ವರ್ಷಗಳ ಬಾಕಿಯನ್ನು ವಸೂಲು ಮಾಡುವುದಕ್ಕೆ ಹೊರಟಿರುವುದರಿಂದ ರೈತರ ಪರಿಸ್ಥಿತಿ ಏನಾಗಿದೆಯೆಂದು ಯೋಚನೆ ಮಾಡಿದ್ದೀರಾ ? ಇದರ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಬಿ ಬಸವಲಿಂಗಪ್ಪ.—೧೫ ವರ್ಷಗಳ ಬಾಕಿಯನ್ನು ವಸೂಲು ಮಾಡಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದೇವೆ. ಆದೇಶಿತಿ ಅವರು ವಸೂಲು ಮಾಡುತ್ತಿದ್ದಾರೆ. ಇದು ಹಾಕಿರತಕ್ಕದ್ದು ಸರಿಯೆಲ್ಲ ಎಂದು ಮನವರಿಕೆಮಾಡಿಕೊಂಡು ಅಂತಹವರು ಅಪೀಲ್ ಹೋಗತಕ್ಕಂಥಾದ್ದನ್ನು ಇರಿಗೇಷನ್ ಆಕ್ಟ್‌ನಲ್ಲಿ ಅಳವಡಿಸಿದ್ದೇವೆ. ಇದರ ಪ್ರಕಾರ ಅಪೀಲು ಹೋಗಿ ಪಜಾ ಮಾಡಿಸಿಕೊಳ್ಳದೆ ನಮ್ಮ ಮೇಲೆ ದೂರು ಹೊರಿಸಿದರೆ ನಾವೇನು ಹಾಮಾಲಿಯದಕ್ಕಾಗುತ್ತದೆ. ಒಂದು ವೇಳೆ ಅಪೀಲು ಹೋಗಿ ಸಂಬಂಧ ಪಟ್ಟ ಅಧಿಕಾರಿಗಳ ಮುಂದೆ ಇತ್ಯರ್ಥವಾಗದೇ ಹೋಗಿದ್ದರೆ ಅವನನ್ನು ಜಾಗ್ರತೆಯಾಗಿ ಇತ್ಯರ್ಥ ಮಾಡಿ ಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವೀರ್ನಾಳಿ ಚಂದ್ರಶೇಖರಪ್ಪ.—ಮಲೆನಾಡಿನ ಸಾಗರ, ಹೊಸನಗರ ಮತ್ತು ತೀರ್ಥಹಳ್ಳಿ ಶಿವಪ್ಪನಾಯಕನ ಆಡಳಿತಲ್ಲಿದ್ದಂಥ ತಾಲ್ಲೂಕುಗಳು, ಆ ಕಾಲದಲ್ಲಿ ಕಟ್ಟಿರುವ ಕೆರೆಗಳು. ನಮ್ಮ ಸರ್ಕಾರ ಬಂದ ಮೇಲೆ ಕಟ್ಟಿದವುಗಳಲ್ಲ. ಅದಕ್ಕೆ ತೂಬೂ ಇಲ್ಲ. ಕೋಡೀ ಇಲ್ಲ, ಆ ಕೆರೆಗಳ ದುರಸ್ತಿ ಇಲ್ಲ. ನಿಮ್ಮ ಅಧಿಕಾರಿಗಳು ಅಚ್ಚುಕಟ್ಟು ನೀರಾವರಿ ಪ್ರದೇಶಗಳನ್ನು ಲಿಸ್ಟ್ ಮಾಡಿರುತ್ತಾರೆ. ಆದರೆ ರೈತನಿಗೆ ಸ್ವಲ್ಪವೂ ನೀರು ಬರುತ್ತಾ ಇಲ್ಲ. ಮಲೆನಾಡಿನಲ್ಲಿ ಒಂದೊಂದು ಸಲ ಹೇರಳವಾಗಿ ಮಳೆಯಾಗಿ ಅಲ್ಪ ಸ್ವಲ್ಪ ನೀರು ಬಂದು ನಿಲ್ಲುತ್ತದೆ. ಆದರೆ ಅಲ್ಲಿರತಕ್ಕ ಕೆರೆಗಳನ್ನು ದುರಸ್ತಿಮಾಡಿಸಿಲ್ಲ. ನೀರು ಬರುತ್ತಾ ಇಲ್ಲ. ಅಚ್ಚುಕಟ್ಟು ಲಿಸ್ಟ್‌ನಲ್ಲಿರೋದರಿಂದ ವಾಟರ್ ರೇಟ್ ಹಾಕುತ್ತಾರೆ ದಿನದಿನಕ್ಕೆ ಜಪ್ತಿ ಬರುತ್ತಿದ್ದಾರೆ. ಮನೆಯಲ್ಲಿರತಕ್ಕ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಆದುದರಿಂದ ಇದಕ್ಕೆ ಯಾವುದಾದರೂ ಅಂತಿಮವಾದ ಪರಿಹಾರ ಕೊಡುತ್ತೀರಾ ?

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ಒಂದು ವಿಷಯ ಹೇಳಬೇಕು. ನೀರು ಎನು ಹರಿಯುತ್ತದೆ ಇದು ಸರ್ಕಾರದ ಆಸ್ತಿ. ಅದನ್ನು ಫ್ರೀಯಾಗಿ ಎಲ್ಲರಿಗೂ ಕೊಡಬೇಕು ಎಂದು ಎನಿಲ್ಲ.

ಹಿಂದೆ ತಾಂತ್ರಿಕವಾಗಿ ಯಾರು ಕೊಟ್ಟಿದ್ದರೋ ಅದು ಇದ್ದೇ ಇದೆ. ಈ ಕೆರೆಗಳಲ್ಲಿ ಇರತಕ್ಕಂಥ ನೀರು ಸರ್ಕಾರದ ಆಸ್ತಿ. ಇದನ್ನು ಉಪಯೋಗಿಸಿದರೆ ನೀವು ಕಂದಾಯ ಕೊಡಲೇಬೇಕು, ಇದು ನಿರ್ವಿವಾದ. ಮಾತು. ದಯಮಾಡಿ ಇದರ ಬಗ್ಗೆ ಪ್ರಶ್ನೆ ಕೇಳಬೇಕಾದ್ದಿಲ್ಲ.

ಶ್ರೀ ಎಂ. ಶೀರ್ನಾಳಿ ಚಂದ್ರಶೇಖರ್.—ಕೆರೆಗಳನ್ನು ದುರಸ್ತಿ ಮಾಡಿಸಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೋಸ್ಕರ ನೀರು ಒದಗಿಸದೇ ಹೋದರೆ ರಿಯಾಯಿತಿ ಕೊಡಬೇಕು ಎಂದು ಹೇಳಿದ್ದೇವೆ. ಇದರ ಬಗ್ಗೆ ಅಧಿಕಾರಿಗಳು ಪರಿಶೀಲನೆಮಾಡಿ ಯಾರಿಗೆ ಕೆರೆಗಳಿಂದ ಪ್ರಯೋಜನವಾಗುವುದಿಲ್ಲ ಅವರಿಗೆ ರಿಯಾಯಿತಿ ಕೊಡಬೇಕು, ಇದರ ಬಗ್ಗೆ ಮಾಹಿತಿಯನ್ನು ಸರ್ಕಾರಕ್ಕೆ ಕೊಡಬೇಕು ಎಂದು ನಿರ್ದೇಶನ ಕೊಟ್ಟಿದ್ದೇವೆ. ಇದರಿಂದ ತಾವು ತೃಪ್ತಿಯಾಗುತ್ತೀರಿ ಎಂದು ಭಾವಿಸಿಕೊಂಡಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಬೆಳೆ ಹಾಳಾದಾಗ ವಾಟರ್ ರೇಟ್ ಮನ್ನಾ ಮಾಡುತ್ತೇವೆ ಎಂದು ತಿಳಿಸಿದಿರಿ. ಬೆಳೆ ಹಾಳಾದಾಗ ಕಾನೂನು ಪ್ರಕಾರ ವಾಟರ್‌ರೇಟ್ ಮನ್ನಾ ಮಾಡಬೇಕಾದರೆ ಸಂಬಂಧಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್, ಅಸಿಸ್ಟೆಂಟ್ ಕಮಿಷನರ್ ಜಂಟಿಯಾಗಿ ಇನ್‌ಸ್ಪೆಕ್ಷನ್ ಮಾಡಿ ಆಚ್ಚುಕಟ್ಟು ನೋಡಿ ಬೆಳೆ ಹಾಳಾಗಿದೆ ಎಂದರೆ ವಾಟರ್‌ರೇಟ್ ಮನ್ನಾ ಮಾಡಿಸಿಕೊಳ್ಳಬಹುದು. ಆದರೆ ಒಂದೊಂದು ಸಬ್ ಡಿವಿಜನ್‌ನಲ್ಲಿ ಈ ತರಹ ಸಾವಿರಾರು ಎಕರೆಗಳಿವೆ. ಇವೆಲ್ಲವನ್ನೂ ಅವರು ನೋಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಸಾವಿರಾರು ಅರ್ಜಿಗಳು ಪೆಂಡಿಂಗ್ ಇವೆ. ಹಿಂದೆ ೫೦ ಎಕರೆ ಆಚ್ಚುಕಟ್ಟಿಗೆ ಫ್ಲಾಟ್ ರೇಟ್ ಫಿಕ್ಸ್ ಮಾಡಿಬಿಡಿ. ರೈತರಿಗೆ ಆಗತಕ್ಕ ಅನಾನುಕೂಲವನ್ನು ತಪ್ಪಿಸಿಬಿಡಿ ಎಂದು ಹೇಳಿದ್ದಕ್ಕೆ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೋದಸಾರಿ ಹೇಳಿದ್ದೀರಿ. ಆದುದರಿಂದ ಅದನ್ನು ಆದಷ್ಟು ಜಾಗ್ರತೆ ಎಫೆಕ್ಟ್‌ಗೆ ಕೊಡುತ್ತೀರಾ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ.—ಹೋದಸಾರಿ ಹೇಳಿದ್ದು ನಿಜ. ಪಿ ಡಬ್ಲ್ಯೂ.ಡಿ. ಮತ್ತು ರೆವಿನ್ಯೂ ಇಲಾಖೆಯವರು ಇಬ್ಬರೂ ಸೇರಿ ಈ ಕೆರೆಗಳ ಅಂಕಿಅಂಶಗಳನ್ನು ತೆಗೆದುಕೊಂಡು ಬಂದು ಅವುಗಳ ಸ್ಥಿತಿಗತಿಗಳನ್ನು ಪರಿಶೀಲನೆಮಾಡಿ ಈ ಒಂದು ಕಂದಾಯವನ್ನು ನಿಗದಿ ಮಾಡಬೇಕು ಎಂದು ಆದೇಶಕೊಟ್ಟಿದ್ದೆವು. ಆದರೆ ಇದುವರೆಗೆ ಆ ರೀತಿ ಆಗಿಲ್ಲ. ಆದುದರಿಂದ ರೆವಿನ್ಯೂ ಇಲಾಖೆಯಿಂದಲೇ ಇದನ್ನು ಮಾಡುತ್ತೇವೆಂದು ಹೇಳಿದ್ದೇನೆ. ಇದರ ಬಗ್ಗೆ ತೀವ್ರವಾಗಿ ಗಮನ ಕೊಡುತ್ತೇನೆ.

ಶ್ರೀ ಕಡಿದಾಳ್ ದಿವಾಕರ್.— ತಾವು ಹೊಸದಾಗಿ ಆಕಾರಬಂದು ಮಾಡಿದಮೇಟೆ ಪೂರ್ಣ ಪ್ರಮಾಣದ ನೀರು ಬಂದರೆ ವಾಟರ್ ರೇಟ್ ಹಾಕಿಸಿದ್ದೀರಿ. ಎರಡನೆಯದು ಅಧಿಕಾರಿಗಳು ಕಂದಾಯ ಹಾಕುತ್ತಾರೆ. ಇದರಿಂದ ಎರಡೆರಡು ತೆರಿಗೆ ಬೀಳುತ್ತದೆ. ಆದುದರಿಂದ ಇದನ್ನು ತೆಗೆಯುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಕಾನೂನು ಪ್ರಕಾರ ಹಾಗೆ ಮಾಡಬೇಕು ಎಂದು ಇದೆ. ಅಧಿಕಾರಿಗಳೇ ನಾವಾದರೂ ತಪ್ಪು ಮಾಡಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.— ನನ್ನ ಪ್ರಶ್ನೆಗೆ ಇಷ್ಟು ಹೊತ್ತಿನವರೆಗೂ ಉತ್ತರ ಬರಲಿಲ್ಲ. ನೀರು ಜಮೀನಿಗೆ ಬಂದಿದ್ದರೆ ಕಂದಾಯ ಕೊಡಲಿಕ್ಕೆ ನಮ್ಮ ವಿರೋಧ ಇಲ್ಲ. ಮಳೆ ಬಂದರೂ ಸರ್ಕಾರ ದವರು ಟ್ಯಾಕ್ಸ್ ಹಾಕುತ್ತಾರೆ. ಮಲೆ ನಾಡಿನಲ್ಲಿ ಮಳೆ ಬಂದು ಜಮೀನು ಕೊಚ್ಚಿಕೊಂಡು ಹೋಗಿ, ಬೆಳೆ ಹಾಳಾದ ಸಂದರ್ಭದಲ್ಲೂ ತೆರಿಗೆ ಕೊಡಿ ಎಂದು ಹೇಳುತ್ತೀರಿ. ಜಮೀನಿಗೆ ಸರಿಯಾದ ನೀರು ಬಂದಿದೆ ಎಂದು ಮನಸದಟ್ಟಾದ ಮೇಲೆ ಕಂದಾಯ ಹಾಕಿ. ಒಬೀರಾಯನ ಕಾಲದಲ್ಲಿ ಮಾಡಿದ ಆಚ್ಚುಕಟ್ಟು ಲಿಸ್ಟ್‌ನಂತೆ ತೆರಿಗೆ ಹಾಕುತ್ತಿದ್ದೀರಿ. ತಾಂತ್ರಿಕವಾದ ನೀತಿಯನ್ನು ಅನುಸರಿಸುವುದರಲ್ಲಿ ರೈತರಿಗೆ ಒಪ್ಪಿಗೆ ಇದೆ. ಆದರೆ ಈ ರೀತಿ ಅಕ್ರಮವಾಗಿ ಹಾಕಿರತಕ್ಕ ಬಗ್ಗೆ ತಾವು ನಿರ್ದಿಷ್ಟವಾದ ಉತ್ತರ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ಮಲೆನಾಡಿನಲ್ಲಿ ಮೊದಲಿನಿಂದಲೂ ತರೀ ಜಮೀನು ಮಾಡುತ್ತಿದ್ದಾರೆ. ಈಗ ಕೆರೆಗಳು ಇರುತ್ತವೆ. ಕೆರೆಗೆ ನೀರು ಬರುತ್ತದೆ ಮತ್ತು ಮಳೆಯಿಂದಲೇ ಬೆಳೆ ಬೆಳೆದರೆ ನೀರಿನ ಕಂದಾಯ ಹಾಕಬಾರದೆಂದು ನಿಮ್ಮ ಇಚ್ಛೆ ಆದರೆ ಹಾಗೆ ಮಾಡುವುದಕ್ಕಾಗುವುದಿಲ್ಲ. ನಿಮಗೆ ಏನಾದರೂ ಸಂಕಷ್ಟಗಳಿದ್ದರೆ ಅಧಿಕಾರಿಗಳಿಗೆ ಆಫೀಲು ಹಾಕಿ, ನೀರಿನಿಂದ ಪ್ರಯೋಜನ ಆಗದೇ ಹೋದರೆ, ನೀರು ಬರದೇ ಹೋದರೆ ಕಂದಾಯ ಮನ್ನಾ ಮಾಡುತ್ತಾರೆ, ಆದುದರಿಂದ ತಾವು ಪುನಃ ಪುನಃ ಎಷ್ಟು ಪ್ರಶ್ನೆ ಕೇಳಿದರೂ ಅಷ್ಟೇ ಉತ್ತರ ಕೊಡುವುದಕ್ಕೆ ಸಾಧ್ಯ.